RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಅಂಮನೆ ಸಿಂಸ್ಕೇದಾರ್ ಎ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

8—2—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಕಾಂಗ್ರೆಸಿನ ವೈರಿಗಳು

ಸ್ವತಂತ್ರ, ಕಮ್ಯೂನಿಸ್ಟ್, ಡಿ ಎಂ ಕೆ ಪಕ್ಷಗಳು ಕಾಂಗ್ರೆಸಿನ ಶತ್ರುಗಳಲ್ಲ, ಇವಕ್ಕೆ ಪ್ರಧಾನತೆಯೂ ಇಲ್ಲ, ಕಾಂಗ್ರೆಸಿನ ಶತ್ರುಗಳೆಂದರೆ ದರಿದ್ರ ಹಾಗೂ ಅಜ್ಞಾನ ಎಂದು ಶ್ರೀ ಟಿ ಕೃಷ್ಣಮಾಚಾರಿ ಲಂಬಾಸಮುದ್ರದಲ್ಲಿ ನುಡಿದರು.

ಕಾಂಗ್ರೆಸಿಗೆ ಸೇರಿದರು

ನಲಗೊಂಡ ಮತ್ತು ಮೆಡಕ್ ಜಿಲ್ಲೆಗಳ ಕೆಲವು ಕಮ್ಯೂನಿಸ್ಟರು ಕಾಂಗ್ರೆಸು ಸೇರಿದರು

ಕುಜಕ್ಕೆ ನೌಕೆ

ಕುಜಗ್ರಹಕ್ಕೆ ರಷ್ಯ ನೌಕೆ ಕಳಿಸಬಲ್ಲುದೆಂದು ಪ್ರೊ|| ಬ್ಲಾರ್ಗಂರೋವ್ ತಿಳಿಸಿರುವುದಾಗಿ ಲಂಡ್ ವಾರ್ತೆ

ಕಾಶ್ಮೀರ ಸಮಸ್ಯೆ ಪರಿಹಾರ ಆಗಬೇಕು

ಕಾಶ್ಮೀರ ಸಮಸ್ಯೆ ಪರಿಹಾರವಾಗುವವರೆಗೆ ಭಾರತದೊಡನೆ ಸಪರ ಬೇಡ ಒಡಂಬಡಿಕೆ ಪ್ರಯೋಜನಕ್ಕೆ ಬಾರದ್ದೆಂಬುದಾಗಿ ಪಾಕಿಸ್ತಾನದ ವಿದ್ಯುತ್ತಿನ ಮಂತ್ರಿ ಅಲಿ ಬುಟ್ಟೋ ಕರಾಚಿಯಲ್ಲಿ ತಿಳಿಸಿದರು.

ಆಗಮನ

ತಮ್ಮ ದೇಶಕ್ಕೆ ಭಾರತದ ಸೈನಿಕರನ್ನು ತರಿಸಿಕೊಳ್ಳುವ ಸಾಧ್ಯತೆ ಪರಿಶೀಲಿಸಲು ಫಿನ್ಲೆಂಡಿನ 15 ಮಂದಿಯ ವಾಣಿಜ್ಯ ನಿಯೋಗ ಭಾರತಕ್ಕೆ ಆಗಮಿಸಿತು

ಮುಷ್ಕರ ಮುಕ್ತಾಯ

ನೆಲ್ಲೂರಿನ ಎ ಆರ್ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರ ಮುಗಿಯಿತು.

ಲಾಕ್ ಔಟ್

600 ಮಂದಿ ನೌಕರರಿರುವ ಎನ್ನೂರು ಲಂ ಟಯರ್ಸ್ ಲಿಮಿಟೆಡ್ ಲಾಕ್‌ಔಟ್ ಆಗಿದೆ

ನೇರ ಸಹಾಯ ಬೇಡ

ಯಾವ ದೇಶದಿಂದಲೇ ಆಗಲಿ ಈ ಸನ್ನಿವೇಶದಲ್ಲಿ ನೇರವಾಗಿ ಸಹಾಯವನ್ನು ಪಡೆಯಲು ತಾವು ಇಚ್ಛಿಸುವುದಿಲ್ಲವೆಂಬುದಾಗಿ ಕಾಂಗೊ ಪ್ರಧಾನಿ ಆಡೌಲ ವಾಷಿಂಗ್ಟನ್ನಿನಲ್ಲಿ ತಿಳಿಸಿದ್ದಾರೆ

ಬೆದರಿಕೆ

ಭಿಂದ್ ಕ್ಷೇತ್ರದಲ್ಲಿ ಪಿಎಸ್ಪಿ ಅಭ್ಯರ್ಥಿ ಸೋಶರೆ ನೀವು ಮುಂದಿನ ಕ್ರಮ ಎದುರಿಸಬೇಕಾದೀತೆಂದು ಜನಸಂಘದ ಅಭ್ಯರ್ಥಿಗೆ ಬೆದರಿಕೆ ಪತ್ರ ಬಂದಿದೆ ಎಂದು ರಾಯ್ಪುರ ವಾರ್ತೆ.

ಜನನ ಕಡಿಮೆ

ಬೆಂಗಳೂರಿನಲ್ಲಿ ಈ ವಾರ ಜನನ ಸಂಖ್ಯೆ ಕಡಿಮೆ ಆಗಿದೆ

ಮುಳುಗಿ ಸಾವು

ಕೊಲಂಬೋದ ರುಹುಮು ರಾಷ್ಟ್ರೀಯ ಪಾರ್ಕಿನಲ್ಲಿ ಬ್ರಿಟಿಷು ಸಮಿತಿ ಸ್ಥಾಪನೆ ಎ ಇ ವಾಟ್ಸ್ ಕೊಳದಲ್ಲಿ ಈಜುತ್ತಿದ್ದಾಗ ಮುಳುಗಿದರು

ಚುನಾವಣೆ ಅನಂತರ

ಕಡ್ಡಾಯ ರಫ್ತಿನ ಶಾಸನ ಮಾಡುವ ವಿಚಾರ ಮುಂದಕ್ಕೆ ಹೋಯಿತೆಂದು ದೆಹಲಿ ವಾರ್ತೆ ತಿಳಿಸುತ್ತದೆ

ನೇಪಾಳದ ಸ್ನೇಹ

ನೇಪಾಳದೊಡನೆ ಯಥಾಸ್ಥಿತಿಯಿಂದ ಇರಲು ಭಾರತ ಕಾತುರವಾಗಿದೆ ಎಂದು ನವ ದೆಹಲಿ ವಾರ್ತೆ

ಬೆಂಕಿ ಅನಾಹುತ

ಚೀನಾದ ನೂತನ ವರ್ಷದ ಸಮಾರಂಭದ ದಿನ ಹಾಂಕಾಂಗಿನಲ್ಲಿ 16 ಗಂಟೆಗಳಲ್ಲಿ 54 ಅಗ್ನಿ ಅನಾಹುತವಾದವು

× ಕಾರಣವಾಂದಲ್ಲಿ ಬೆಸ್ತರಿಗೆ ಇನ್ನೂ ವಿಮಾನು ಸಿಕ್ಕಿಲ್ಲ

ಸಹಕಾರ ವ್ಯವಸಾಯ

ಸಹಕಾರ ವ್ಯವಸಾಯದಿಂದ ನಾನಾ ಅನುಕೂಲಗಳಿವೆಯೆಂದು ಪಂ|| ನೆಹರು ಮದ್ರಾಸಿನಲ್ಲಿ ನುಡಿದರು

ಕೋರಂ ಸದಸ್ಯರು

ಶಾಸನ ಸಭೆಯ ಮಹಿಳಾ ಸದಸ್ಯರು ಹಾಗೂ ಪಾರ್ಲಿಮೆಂಟಿನ ಮಹಿಳಾ ಸದಸ್ಯರು ಕೋರಂ ಸದಸ್ಯರು ಎಂಬ ಹೆಸರು ಗಳಿಸಿದ್ದಾರೆ ಎಂದು ವಿದೇಶ ಉಪ ಮಂತ್ರಿ ಶ್ರೀಮತಿ ಲಕ್ಷ್ಮಿ ಮೆನನ್ ಹಾ ಸನದಲ್ಲಿ ತಿಳಿಸಿದರು

ಇಂಗ್ಲೀಷ್ ಉಳಿಯಲಿ

ಭಾರತದಲ್ಲಿ ಇಂಗ್ಲೀಷು ಭಾಷೆ ಉಳಿಸಿಕೊಳ್ಳಬೇಕೆಂದು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಬೊಂಬಾಯಿ ನಲ್ಲಿ ತಿಳಿಸಿದರು

ವಿಮಾನ ಇಳಿಸಲು ಅವಕಾಶ

ನ್ಯೂಗಿನಿಸಿಗೆ ಹೋಗುವ ಡಚ್ಚರ ವಿಮಾನಗಳಿಗೆ ಇಳಿಯಲು ತಾನು ಅವಕಾಶವನ್ನು ಕೊಡುವುದಾಗಿ ಪೆಸಿಫಿಕ್ ದ್ವೀಪ ತಿಳಿಸಿದೆ.

ಉದ್ಘಾಟನೆ

ಭಾರತ ಬಿಟಿಷು ಸಹಕಾರದ ಉದ್ಯಮ ಉಕ್ಕಿನ ಕಾರ್ಖಾನೆಯನ್ನು ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಡಾ|| ಬಿ ಸಿ ರಾಯ್ ಉದ್ಘಾಟಿಸಿದರು

★

ಆಚಾರ್ಯ ವಿನೋಬಾರಿಗೆ ಅಸ್ಸಾಂನಲ್ಲಿ 500 ಗ್ರಾಮಗಳು ದಾನವಾಗಿ ಸಿಕ್ಕಿವೆ

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಮ್ಜ ಜೋಯಿಸರಿಂದ
9 ಪಂಚಮಿ ರೇವತಿ

ವಿವಿಧ ವಿಷಯಗಳು

ಕೇಂದ್ರ ಗೃಹಮಂತ್ರಿ ಶ್ರೀ ಲಾಲ ಬಹದ್ದೂರ ಶಾಸ್ತ್ರಿಯವರು ಜಯಪುರದಲ್ಲಿ ಹೇಳಿಕೆಯಿತ್ತು, ಉತ್ತಮವಾದ ವಿರೋಧ ಪಕ್ಷವನ್ನು ತಾವು ಸ್ವಾಗತಿಸುವುದಾಗಿ ತಿಳಿಸಿದರು

೦೦

ಅಷ್ಟಗ್ರಹವನ್ನು ವ್ಯಾರ್ಥಿಸಲು ಕೆಲಜ ನಾವಣೆ ಉಮೇದುವಾರರು ಕೃಷ್ಣ ನದಿಯಲ್ಲಿ ಸ್ನಾನ ಮಾಡಲು ತಮ್ಮ ಕಾರುಗಳನ್ನು ಕೊಟ್ಟಿದ್ದರೆಂದು ರಾಯಚೂರಿನಿಂದ ಬಂದ ವರದಿ ತಿಳಿಸುತ್ತದೆ

೦೦

ಹಾಸನ-ಮಂಗಳೂರು ರೈಲ್ವೆ ಈ ಕೂಡಲೇ ನಿರ್ಮಾಣವಾಗಬೇಕೆಂದು ಹುಬ್ಬಳ್ಳಿ ವರ್ತಕ ಸಂಘ ಒತ್ತಾಯಪಡಿಸಿದೆ

೦೦

ನಿರುದ್ಯೋಗ ಇರುವದಕ್ಕೆ ಜನರು ಕಾಂಗ್ರೆಸನ್ನು ದೂಂಬಾರದು, ನಿರುದ್ಯೋಗಕ್ಕೆ ಜನಸಂಖ್ಯೆಯ ಸೋವಾಂತಿಕ ಜಾತಿಯತೆ ಇವೇ ಕಾರಣವೆಂದು ಹಾಸನದಲ್ಲಿ ಉಪ ವಿದೇಶ ಮಂತ್ರಿ ಶ್ರೀಮತಿ ಲಕ್ಷ್ಮೀ ಮೆನನ್ ತಿಳಿಸಿದರು

೦೦

ಅಣೆಕಟ್ಟಿನ ಬಳಿ ಪ್ರತಿಮೆಯೊಂದನ್ನು ಭಕ್ತ ನಂಗಾಲ ಅಣೆಕಟ್ಟಿನ ಅಡಳಿತಗಾರರು ನಿರ್ಮಿಸಿರುವರೆಂದು ಚಂಡಿಘರ್ ವಾರ್ತೆ 170 ಕೋಟಿ ರೂ ಕಾರ್ಮಿಕ ಕಟ್ಟಡವನ್ನು ದೇಶಕ್ಕಾಗಿ ಕೊಟ್ಟಿದೆ ಎಂದು ಅದುಲ್ಲಿ ಬರೆಯಲಾಗಿದೆ

೦೦

ಬೊಂಬಾಯಿನಲ್ಲಿರುವ 25 ಸಾವಿರ ಭಿಕ್ಷುಕರಿಗೆ ದಿನವೊಂದಕ್ಕೆ ರೂ 10 ಸಹಸ್ರ ರೂ ಭಿಕ್ಷೆಯು ರೂಪದಲ್ಲಿ ಸಿಗುತ್ತಿದೆ

★

ಅಡಳಿತದಲ್ಲಿ ನಿದಾನ ಮತ್ತು ಕೆಲಸದಲ್ಲಿ ನಿದಾನ ತಡೆಯುವುದರಿಂದ ಲಂಚ ತಡೆಯಬಹುದೆಂದು ಹುಬ್ಬಳ್ಳಿಯಲ್ಲಿ ಶ್ರೀ ಬಿ ಡಿ ಜತ್ತಿಯವರು ತಿಳಿಸಿದ್ದಾರೆ

ರಾಯಚೂರಿನಿಂದ ಬಂದಿರುವ ವರದಿಯ ತೆ ಬೆ-ಕಿ ಅನಾಹುತದಲ್ಲಿ ಕೊಪ್ಪಳ ಪಟ್ಟಣದಲ್ಲಿ ರೂ 20 ಸಾವಿರ ಬೆಲೆಯ ಹುಲ್ಲು ಬೂದಿ ಆಯಿತು

ವದಂತಿ ಸುಳ್ಳು

ಪ್ರಧಾನಿ ಕೃಶ್ಚೇನಂ ಕೊಲೆ ಪ್ರಯತ್ನ ನಡಿಯಿತೆಂಬ ವದಂತಿ ಸುಳ್ಳೆಂದು ರಷ್ಯ ಸರ್ಕಾರಿಂದ ಪ್ರಮುಖರೋರ್ವರು ಮಾಸ್ಕೋದಲ್ಲಿ ನುಡಿದರು.

ನಿರ್ಬಂಧದ ಬಗ್ಗೆ ಪರಿಶೀಲನೆ

ಇಂಡೋನೇಷಿಯಾ ಪಶ್ಚಿಮ ಹಾಲೆಂಡಿನ ಮಾತುಕತೆ ಮುರಿದುಬೀಳುವ ದಾದರೆ ಅಥವಾ ಸೇನ ಜಂಘಿ ಪರಿಸ್ಥಿತಿ ಉಂಟು ಆಗುವದಾದರೆ ಪಶ್ಚಿಮ ನ್ಯೂಗಿನಿಗೆ, ಹಾಲೆಂಡಿನ ವಿಮಾನವನ್ನು ಬಿಡುವ ಅಂಶ ಪರಿಶೀಲಿಸುವದಾಗಿ ಅಮೆರಿಕ ತಿಳಿಸಿದೆ.

ಮುಂದುವರಿಯಿತು

ಸಾರ್ವತ್ರಿಕ ಚುನಾವಣೆ ಮುಗಿಯುವ ವರಿಗೆ ದಕ್ಷಿಣ ವಲಯದ ಪೋಲೀಸು ವಲಯದ ಉದ್ಘಾಟನೆ ಮುಂದುವರಿಯಿತೆಂದು ಮದ್ರಾಸಿನ ವಾರ್ತೆ

ಸಮ್ಮೇಳನ ಕರೆಯಲು ಸಿದ್ಧ

ಯೂರೋಪಿಯನ್ ಕಾಮನ್ ಮಾರ್ಕೆಟ್ ಸಂಬಂಧಪಟ್ಟಂತೆ ತಾವು ಕಾಮನ್‌ವೆಲ್ತಿನ ಪ್ರಧಾನಿಗಳ ಸಮ್ಮೇಳನ ಕರೆಯಲು ಸಿದ್ಧವೆಂದು ಪ್ರಧಾನಿ ಮ್ಯಾಕ್ಮಿಲನ್ ಲಂಡನ್ನಿನಲ್ಲಿ ತಿಳಿಸಿರುವರು

ಭಾರತಕ್ಕೆ ನೆರವು

ಪದಾರ್ಥಗಳು ಹಾಗೂ ಯಂತ್ರದ ಆಮದಿಗೋಸ್ಕರ 400 ಮಿಲಿಯ ಡಾಲರುಗಳ ಸಾಲವನ್ನು ಅಮೆರಿಕ ಭಾರತಕ್ಕೆ ಬೇಗ ಕೊಡಲಿದೆ

o o

ಘರ್ಷಣೆಯಲ್ಲಿ ಡಾಕ್ಕಾ ವಿಶ್ವವಿದ್ಯಾನಿಲಯದ 7 ವಿದ್ಯಾರ್ಥಿಗಳು ಲಾಠಿ ಪ್ರಹಾರದಿಂದ ಗಾಯಗೊಂಡರು ಆ ಪೈಕಿ ಓರ್ವರಿಗೆ ತುಂಬಾ ಗಾಯವಾಗಿದೆ ಸೇನೆಯವರು 3 ಸುತ್ತು ಗುಂಡುಹಾರಿಸಿದರೆಂದು ವಂದಿ

o o

ಈ ಮಾಹೆ 6 ರ ವರಿಗೆ ಪ್ರಪಂಚದಲ್ಲಿ ಒಟ್ಟು ಹುಟ್ಟಿದವರು 77 ಸಾವಿರ ಮಿಲಿಯ ಇದರಲ್ಲಿ ಸತ್ತವರೂ ಸೇರಿದ್ದಾರೆ ಈಗಿನ ಜನಸಂಖ್ಯೆ 3 ಸಾವಿರ ಮಿಲಿಯ

SHAKTI SUDHA

★

A Superb Tonic

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ವುಡ್‌ಲಾಂಡ್ಸ್ 9–2–62 ರಿಂದ

ಅನೋಘ ಆರಂಭ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ– ಶಂಕರ್-ಜೈಕಿಶನ್ [ದಿನವಹಿ 4 ಪ್ರದರ್ಶನಗಳು]

ಆಪೆರಾ 2–2–62 ರಿಂದ

ಭೂಕೈಲಾಸ (ಕನ್ನಡ)

ತಾರಾಗಣ— ರಾಜಕುಮಾರ್, ಜಮುನ, ಇ ವಿ ಸರೋಜ, ರಂಗರಾವ್ ಕಮಲಾ ಲಕ್ಷ್ಮಣ್, ಗೋಪಿ ಕೃಷ್ಣ. [ದಿನವಹಿ 3 ಆಟಗಳು]

Solid Satellite Launcher

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರ ನಕ್ಷತ್ರದ ಮುಂದೆ X ಹೀಗೆ ಸೀಲ್ ಹಾಕಿ

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.